ದಿನಾಂಕ 19.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಪ್ರತಿವಾದಿ 2 ರಿಂದ 4 ರ ಪರ ವಕೀಲರಿಂದಃ-**

ನಾನು ಈ ದಾವೆಯಲ್ಲಿ ಪ್ರತಿವಾದಿ ಪರ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿದೆ.

ನಿಶಾನೆ ಡಿ. 21 ರಲ್ಲಿ ನನ್ನ ತಂದೆ ಟಿ.ಎ. ಕಾರ್ಯಪ್ಪರವರ ಸಹಿ ಇದೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ. ಡಿ. 21(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ.ಕೆ.ವಿ.ಎನ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತಯಾರಿಸಲು ಮಾಹಿತಿಯನ್ನು ವಕೀಲರಿಗೆ ನಾನು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ವೃತ್ತಿಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಟಿ.ಎ. ಕಾರ್ಯಪ್ಪರವರ ಮಗ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷ್ಯ ನುಡಿಯಲು

ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿರುವುದಿಲ್ಲ. ಪೂಣಚ್ಚರವರ ಕೋರಿಕೆಯ ಮೇರೆಗೆ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ತೀತಮಾಡ ನಂಜಪ್ಪರವರ ಕುಟುಂಬದ ವೈಯಕ್ತಿಕ ಮಾಹಿತಿ ನನಗೆ ಗೊತ್ತಿದೆ. ನಾನು ಚಿಕ್ಕವಯಸ್ಸಿನವನಾಗಿದ್ದಾಗ ತೀತಮಾಡ ಭೀಮಯ್ಯರವರು ಮೈಸೂರಿನಲ್ಲಿ ಲಾರಿ ಚಾಲಕರಾಗಿದ್ದರು. ನಿಶಾನೆ ಡಿ. 21 ರ ವಿಚಾರವನ್ನು ನನ್ನ ತಂದೆಯು ನನಗೆ 25 ವರ್ಷ ವಯಸ್ಸಾಗಿದ್ದಾಗ ಹೇಳಿರುತ್ತಾರೆ. ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೀಗ ಜ್ಞಾಪಕವಿಲ್ಲ.

ತೀತಮಾಡ ಭೀಮಯ್ಯ, ತೀತಮಾಡ ಗಣಪತಿ ಮತ್ತು ತೀತಮಾಡ ಅರ್ಜುನ ರವರುಗಳು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಮನೆಯ ಪಕ್ಕದಲ್ಲಿ ತೀತಮಾಡ ಗಣಪತಿಯವರ ಮನೆ ಇದೆ. ಅವರ ಮನೆಯ ವಿಚಾರಗಳನ್ನು ನಾನು ತಿಳಿದುಕೊಳ್ಳುತ್ತಿರಲಿಲ್ಲ. ನನ್ನ ತಂದೆಯ ಬೇರೆ ಸಹಿವುಳ್ಳ ದಾಖಲೆಗಳು ಇರುವುದಿಲ್ಲ.

ನನ್ನ ತಂದೆ 2ನೇ ತರಗತಿಯವರೆಗೆ ಓದಿರುತ್ತಾರೆ. ನಿಶಾನೆ ಡಿ. 21 ದಾಖಲೆಗೆ ನನ್ನ ತಂದೆಯು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ. 21 ರ ದಾಖಲೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ತಂದೆಯ ಸಹಿ ಇರುವ ಇತರೆ ದಾಖಲೆಗಳು ನನ್ನ ಬಳಿ ಇದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಅವುಗಳಲ್ಲಿರುವ ನನ್ನ ತಂದೆಯ ಸಹಿಗೂ ಮತ್ತು ನಿಶಾನೆ ಡಿ. 21 ರಲ್ಲಿರುವ ನನ್ನ

ತಂದೆಯ ಸಹಿಗೂ ವ್ಯತ್ಯಾಸ ಕಾಣುತ್ತದೆ ಎಂಬ ಕಾರಣದಿಂದ, ನಾನು ಆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ. 21 ರ ಪ್ರಕಾರ ಅದರಲ್ಲಿನ ಪಕ್ಷಗಾರರು ಯಾವ ಸರ್ವೆ ನಂಬರ ಗಳಲ್ಲಿ ಎಷ್ಟು ವಿಸ್ತೀರ್ಣ ದ ಜಾಗದಲ್ಲಿ ಸ್ವಾ ಧೀನದಲ್ಲಿ ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಮತ್ತು ಪೂಣಚ್ಚ ಆತ್ಮೀಯರು ಎಂದರೆ ಸರಿ.

ನನಗೆ ತೀತಮಾಡ ನಂಜಪ್ಪರವರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ, ಪೂಣಚ್ಚರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.